ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯಕಾಲ    ದಿನಾಂಕ : DATE 21/2/2021

# ಸರ್ಕಾರ ವಿಶೇಷ ಸಂಪುಟ ಕರೆದು ತೀರ್ಮಾನಿಸಲಿ

## ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ

ಬೆಂಗಳೂರು: ಸರ್ಕಾರ ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ಮನವಿ ಸ್ವೀಕರಿಸಲು ಬರುವುದು ಬೇಡ, ವಿಶೇಷ ಸಂಪುಟ ಕರೆದು ತೀರ್ಮಾನ ಮಾಡಲಿ ಎಂದು ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ನಗರದ ಶಿವನಹಳ್ಳಿಯಿಂದ ಫ್ರೀಡಂ ಪಾರ್ಕ್ ವರೆಗೆ ಪಾದಯಾತ್ರೆ ನಡೆಸಿ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಅಖಂಡ ಲಿಂಗಾಯತ ಇತಿಹಾಸದಲ್ಲೇ ಮೊದಲಬಾರಿಗೆ ನಡೆದಿರುವ ದೊಡ್ಡ ಪಾದಯಾತ್ರೆ ಪಂಚಮಸಾಲಿ ಪಾದಯಾತ್ರೆ. ಈ ಪಾದಯಾತ್ರೆ ಪ್ರಾರಂಭ ಆದ ನಂತರವೇ ಸಣ್ಣಪುಟ್ಟ ಸಮುದಾಯಗಳು ಮೀಸಲಾತಿ ಹೋರಾಟ ಪ್ರಾರಂಭಿಸಿವೆ. ನಮ್ಮದು 26 ವರ್ಷಗಳ ಹಿಂದಿನಿಂದ ಹಕ್ಕೊತ್ತಾಯ . ನಮಗೆ ಪೀಠದಿಂದ ಗುರುಗಳು ಮಾಡಿದ್ದು ಕೇವಲ ಆಶೀರ್ವಾದ ಮಾಡಲಿಕ್ಕೆ ಅಲ್ಲ. ನಮ್ಮಿಂದ ಮೀಸಲಾತಿ ಸಿಗುತ್ತದೆ ಅನ್ನುವ ಆಶಾಭಾವನೆ ಇದೆ. ನಾವು ಎಷ್ಟೇ ಹೋರಾಟ ಮಾಡಿದ್ರೂ ಸರ್ಕಾರಗಳು ಬಂದ್ವು ಹೋದ್ವು ಆದರೆ ನಮ್ಮ ಮಾತು ಕೇಳಲಿಲ್ಲ ಎಂದರು.

ಪ್ರಸ್ತುತ ಮೀಸಲಾತಿ ಚರ್ಚೆ ಶುರುವಾಗಿದೆ. ನಮ್ಮ ಪಾದಯಾತ್ರೆಗೆ ಅನೇಕ ಜನ ಪ್ರತಿನಿಧಿ ಹಾಗೂ ಬೇರೆ ಸಮುದಾಯಗಳು ಬೆಂಬಲ ಕೊಟ್ಟಿವೆ. ಮೊನ್ನೆ ಸಿಹಿ ಸುದ್ದಿ ಸಿಗಲಿಲ್ಲ. ಕೇವಲ ಚರ್ಚೆ ಆಯ್ತು ವಿನಃ ಯಾವುದೇ ನಿರ್ಧಾರ ಕೈಗೊಳ್ಳಲಿಲ್ಲ ಎಂದರು. ಸಮಾ ವೇಶ ಮುಗಿದ ನಂತರ ವಿಧಾನಸೌಧಕ್ಕೆ ರ್‍ಯಾಲಿ ಮಾಡಲಿದ್ದೇವೆ. ನಂತರ ಗಾಂಧೀಜಿಯವರಂತೆ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಲಿದ್ದೇವೆ. ಸಮಾ ವೇಶಕ್ಕೆ ಬರುವವರು ಶಾಂತಿ ಸಂಯಮ ಕಾಪಾಡ ಬೇಕು ಎಂದು ಸ್ವಾಮೀಜಿ ಹೇಳಿದರು.

ಪಂಚಮಸಾಲಿ ಸಮುದಾಯದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಮಾತನಾಡಿ, ಮೀಸಲಾತಿ ಪಾದಯಾತ್ರೆ ರ್‍ಯಾಲಿ ಯಶಸ್ವಿಯಾಗಿದೆ. 21 ರ ಮೀಸಲಾತಿ ಗಡುವು ಮುಗಿದಿದೆ. ಈಗಾಗಲೇ 50 ಸಾವಿರಕ್ಕೂ ಹೆಚ್ಚು ಜನ ಬಂದಿದ್ದಾರೆ. ಸಿ ಎಂ ಯಡಿಯೂರಪ್ಪ ನಮಗೆ ಮೀಸಲಾತಿ ಕೊಡುತ್ತಾರೆ ಅಂತ ಅಂದುಕೊಂಡಿದ್ದೇವು. ಮಾರ್ಚ್ 4 ರವರೆಗೂ ಧರಣಿ ಸತ್ಯಗ್ರಹ ನಡೆಸುತ್ತೇವೆ. ತದ ನಂತರ ಮಾಡು ಇಲ್ಲವೇ ಮಡಿ ಹೋರಾಟ ನಡೆಯಲಿದೆ ಎಂದು ಹೇಳಿದರು.

### ಪಂಚಮಸಾಲಿ ಸಮಾವೇಶ: ಸಂಚಾರ ಮಾರ್ಗ ಬದಲು

ಇಂದು ಪಂಚಮಸಾಲಿ ಸಮಾವೇಶ ಅರಮನೆ ಮೈದಾನದಲ್ಲಿ ನಡೆಯಲಿದ್ದು, ಕನಕಪುರ ರಸ್ತೆ ಕಡೆಯಿಂದ ಬರುವವರು ಕನಕಪುರ ರಸ್ತೆ- ಬನಶಂಕರಿ ದೇವಸ್ಥಾನ ಬಸ್ ನಿಲ್ದಾಣ- ರಾಜಲಕ್ಷ್ಮಿ ಜಂಕ್ಷನ್ ಮೂಲಕ ಜಯನಗರ 4ನೇ ಮುಖ್ಯ ರಸ್ತೆ- ಸೌತ್ ಎಂಡ್ ವೃತ್ತ-ಆರ್.ವಿ.ಜಂಕ್ಷನ್ -ಲಾಲ್‌ಬಾಗ್ ಪಶ್ಚಿಮ ಗೇಟ್-ಮಿನರ್ವ ವೃತ್ತ-ಜೆ.ಸಿ.ರಸ್ತೆ- ಜಯಮಹಲ್ ರಸ್ತೆ ಮೂಲಕ ಬರಬೇಕು. ಬನ್ನೇರುಘಟ್ಟ ರಸ್ತೆ ಕಡೆಯಿಂದ ಬರುವವರು-ಬನ್ನೇರುಘಟ್ಟ ರಸ್ತೆ, ಹೊಸೂರು ಕಡೆಯಿಂದ ಬರುವ ವಾಹನಗಳು, ಹೊಸೂರು ರಸ್ತೆ-ಮಡಿವಾಳ ಚೆಕ್‌ಪೋಸ್ಟ್ -ಡೈರಿ ವೃತ್ತ- ಡಾ.ಮರಿಗೌಡ ರಸ್ತೆ-ವಿ.ಎಚ್.ವೃತ್ತ-ಲಾಲ್ ಬಾಗ್ ಮುಖ್ಯದ್ವಾರ-ಮಿನರ್ವ ವೃತ್ತ ಮಾರ್ಗವಾಗಿ ಬರಬೇಕು. ಬಳ್ಳಾರಿ ರಸ್ತೆ ಕಡೆಯಿಂದ ಬರುವವರು. ಕೊಡಿಗೇಹಳ್ಳಿ ಗೇಟ್-ಹೆಬ್ಬಾಳ ಮೇಲು ಸೇತುವೆ-ಮೇಖ್ರಿ ವೃತ್ತ ಸರ್ವೀಸ್ ರಸ್ತೆ-ಜಯಮಹಲ್ ರಸ್ತೆ ಮೂಲಕ ಆಗಮಿಸಬೇಕು. ಕಾರು ಮತ್ತು ದ್ವಿಚಕ್ರ ವಾಹನಗಳಲ್ಲಿ ಬರುವವರು ತ್ರಿಪುರ ವಾಸಿನಿ ಆವರಣದಲ್ಲಿ ವಾಹನಗಳನ್ನು ನಿಲುಗಡೆ ಮಾಡಬಹುದು. ಗಣ್ಯ ಮತ್ತು ಅತಿಗಣ್ಯ ವ್ಯಕ್ತಿಗಳ ವಾಹನಗಳನ್ನು ರಮಣಮಹರ್ಷಿ ರಸ್ತೆ ಮೂಲಕ ಕೃಷ್ಣವಿಹಾರ ಮೈದಾನದಲ್ಲಿ ನಿಲುಗಡೆ ಮಾಡಲು ಅನುವು ಮಾಡಿಕೊಡಲಾಗಿದೆ.

### ವಾಹನ ನಿಲುಗಡೆ ನಿಷೇಧ

ಭಾನುವಾರ ಬೆಳಗ್ಗೆ 4 ಗಂಟೆಯಿಂದ ಕಾರ್ಯಕ್ರಮ ಮುಗಿಯುವವರೆಗೆ ರಮಣಮಹರ್ಷಿ ರಸ್ತೆ, ಸರ್.ಸಿ.ವಿ.ರಾಮನ್ ರಸ್ತೆ, ಬಳ್ಳಾರಿ, ಹೆಬ್ಬಾಳ ಮೇಲುಸೇತುವೆ, ಎಚ್.ಕ್ಯೂ.ಟಿ.ಸಿ ಮತ್ತು ಮೇಖ್ರಿ ವೃತ್ತ, ಜಯಮಹಲ್, ತರಳಬಾಳು, ಎಂ.ವಿ. ಜಯರಾಮನ್ ರಸ್ತೆ, ಪ್ಯಾಲೇಸ್ ರಸ್ತೆ, ಪಿಆರ್‌ಟಿಸಿ ಜಂಕ್ಷನ್‌ನಿಂದ ವಾಟರ್ ಟ್ಯಾಂಕ್ ಜಂಕ್ಷನ್ ಹಾಗೂ ಟಿ.ಚೌಡಯ್ಯ ರಸ್ತೆಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. ಇನ್ನು ಅರಮನೆ ಮೈದಾನ ಸುತ್ತ-ಮುತ್ತಲ ಮಾರ್ಗಗಳಲ್ಲಿ ಸಂಚರಿಸುವ ವಾಹನ ಸವಾರರಿಗೆ ಪರ್ಯಾಯ ಮಾರ್ಗ ಸೂಚಿಸಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.